ಸರ್ಕಾರಿ ಆದೇಶ ಸಂಖ್ಯೆ :ಹೆಚ್‌ಯುಡಿ 352 ಕೆಹೆಚ್‌ಬಿ 92, ದಿನಾಂಕ 8-1-93ರ ಅನ್ವಯ ಜಿಲ್ಲೆಯ ಜಿಲ್ಲಾಧಿಕಾರಿಗಳಿಗೆ ಸಂಪೂರ್ಣ ಅಧಿಕಾರ ನೀಡಿ ಆಶ್ರಯ ಮನೆ ನಿರ್ಮಾಣದಲ್ಲಿ ಯಾವುದು ಅತ್ಯುತ್ತಮವೊ ಅಂತಹ ವಿನ್ಯಾಸವನ್ನು (ಡಿಸೈನ್) ಅನುಸರಿಸಿ ಮನೆಗಳನ್ನು ನಿರ್ಮಾಣ ಮಾಡುವಂತೆ ತಿಳಿಸಿದೆ. ಅಲ್ಲದೆ ಈಗಾಗಲೇ ಗೃಹ ಮಂಡಲಿಯು ಅನುಮೋದಿಸಿರುವ ವಿನ್ಯಾಸವನ್ನು ಕೂಡ ಗಣನೆಗೆ ತೆಗೆದುಕೊಳ್ಳಲು ಸೂಚಿಸಿದೆ.

ವಿಷಯ:- ಷುಗರ್ ಡೆವಲಪ್‌ಮೆಂಟ್ ಟ್ಯಾಕ್ಸ್ ಕುರಿತು

ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ 168(315)

ಶ್ರೀ ಉಮೇಶ ವಿ.ಕತ್ತಿ(ಹುಕ್ಕೇರಿ ಪೂರ್ವಭಾಗ)

ಮಾನ್ಯ ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

(ಅ) ರಾಜ್ಯದಲ್ಲಿ ಸರ್ಕಾರದವರು ಸಕ್ಕರೆ ಕಾರ್ಖಾನೆಗಳಿಂದ ಸಕ್ಕರೆ ಅಭಿವೃದ್ಧಿಕರ ವಸೂಲು ಮಾಡುತ್ತಿರುವರೆ;

(ಆ) ಹಾಗಿದ್ದಲ್ಲಿ, ಈವರೆಗೆ ವಸೂಲು ಮಾಡಿದ ಕರ ಎಷ್ಟು;

(ಇ) ಬೆಳಗಾವಿ ಜಿಲ್ಲೆಯಿಂದ ವಸೂಲು ಮಾಡಿದ ಕರ ಎಷ್ಟು;

(ಈ) ಆವುಗಳಲ್ಲಿ ಬೆಳಗಾವಿ ಜಿಲ್ಲೆಯ ಕಬ್ಬು ಅಭಿವೃದ್ಧಿಗಾಗಿ ವ್ಯಯಿಸಲಾದ ಹಣ ಎಷ್ಟು;(ಖರ್ಚು ಮಾಡಲಾದ ಹಣ ಎಷ್ಟು)

(ಉ) ಕಳೆದ ಮೂರು ವರ್ಷಗಳಿಂದ ವಸೂಲಾದ ಹಾಗೂ ಖರ್ಚು ಮಾಡಲಾದ ಹಣವೆಷ್ಟು;

ಡಾ :ಹೆಗ್ಗಪ್ಪ ಲಮಾಣಿ

(ಸಕ್ಕರೆ ಸಚಿವರು)

ರಾಜ್ಯ ಸರ್ಕಾರ ಸಕ್ಕರೆ ಕಾರ್ಖಾನೆಗಳಿಂದ ಸಕ್ಕರೆ ಅಭಿವೃದ್ಧಿ ಕರ ಯಾವುದೂ ವಸೂಲು ಮಾಡುತ್ತಿರುವುದಿಲ್ಲ.

ಉದ್ಭವಿಸುವುದಿಲ್ಲ.

ಉದ್ಭವಿಸುವುದಿಲ್ಲ.

ಅನ್ವಯಿಸುವುದಿಲ್ಲ.

ಉದ್ಭವಿಸುವುದಿಲ್ಲ.

ವಿಷಯ:- ಮುಳಬಾಗಿಲು ಪಟ್ಟಣದಲ್ಲಿ ಪರಿಶಿಷ್ಟ ಜಾತಿಯವರ ವಿದ್ಯಾರ್ಥಿನಿಲಯ ಕಟ್ಟಡದ ಬಗ್ಗೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 170(245)

ಶ್ರೀ ಎಂ.ವಿ.ವೆಂಕಟಪ್ಪ(ಮುಳಬಾಗಿಲು)

ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

(ಅ) ಮುಳುಬಾಗಿಲು ಪಟ್ಟಣದಲ್ಲಿ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ನಿಲಯದ ಕಟ್ಟಡ ಕಟ್ಟಲು ವಿಳಂಬವಾಗುತ್ತಿರುವುದಕ್ಕೆ ಕಾರಣವೇನು?

(ಆ) ಸುಮಾರು ಮುನ್ನೂರು ಜನ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿರುವ ಪ್ರಯುಕ್ತ ಶೀಘ್ರವೇ ಕಟ್ಟಡ ಕಟ್ಟಲು ಕ್ರಮ ಕೈಗೊಳ್ಳುವರೇ?